## ಮಧ್ಯಂತರ ಅರ್ಜಿ ಸಂಖ್ಯೆ **IV** ರ ಮೇಲೆ ಆದೇಶ

ವಾದಿಯ ಪರವಾಗಿ ಮಧ್ಯಂತರ ಅರ್ಜಿ ಸಂಖ್ಯೆ IV ಸಿ.ಪ್ರ.ಸಂಹಿತೆ ಕ್ರಮಾದೇಶ 1 ನಿಯಮ 10(2) ಸಹ ಕಲಂ.151 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಉದ್ದೇಶಿತ ಪ್ರತಿವಾದಿಯನ್ನು ದಾವಾದಲ್ಲಿ 4 ನೇ ಪ್ರತಿವಾದಿಯನ್ನಾಗಿ ಸೇರ್ಪಡೆಗೊಳಿಸಬೇಕೆಂದು ಕೋರಿರುತ್ತಾರೆ.

**2.** ಸದರಿ ಅರ್ಜಿಯ ಮೇಲೆ ಉದ್ದೇಶಿತ 4 ನೇ ಪ್ರತಿವಾದಿಗೆ ನೋಟಿಸ್ ಜಾರಿಮಾಡಿದ್ದು, ವಕೀಲರ ಮೂಲಕ ಹಾಜರಾಗಿ ತಕರಾರನ್ನು ಸಲ್ಲಿಸಿರುತ್ತಾರೆ.

**3.** ವಾದವನ್ನು ಆಲಿಸಲಾಯಿತು. ಕಡತವನ್ನು ಪರಿಶೀಲಿಸಲಾಗಿ, ವಾದಿ ತನ್ನ ಅರ್ಜಿಯೊಂದಿಗೆ ಲಗತ್ತಿಸಿದ ಪ್ರಮಾಣ ಪತ್ರದಲ್ಲಿ, ಪ್ರತಿವಾದಿ 1 ಮತ್ತು 2 ರವರು ದಾವಾ ಆಸ್ತಿ ಸರ್ವೆ ನಂ.94/1 ಕ ವಿಸ್ತೀರ್ಣ 4 ಎಕರೆ 8 ಗುಂಟೆ ಜಮೀನನ್ನು ದಿನಾಂಕ 08.08.2022 ರಂದು ಉದ್ದೇಶಿತ ಪ್ರತಿವಾದಿ ನಂ.4 ರವರಿಗೆ ಕಾನೂನುಬಾಹಿರವಾಗಿ ಖರೀದಿ ಕೊಟ್ಟಿರುತ್ತಾರೆ. ಸದರಿ ಉದ್ದೇಶಿತ ಪ್ರತಿವಾದಿ 4 ರವರು ಪ್ರಸ್ತುತ ದಾವೆಗೆ ಅವಶ್ಯಕ ಪಕ್ಷಕಾರರು ಆಗಿರುತ್ತಾರೆ. ಸದರಿಯವರನ್ನು ದಾವಾದಲ್ಲಿ ಪ್ರತಿವಾದಿ 4 ಎಂದು ಪಕ್ಷಕಾರರನ್ನಾಗಿ ಸೇರ್ಪಡೆಗೊಳಿಸಬೇಕೆಂದು ಕಾರಣಗಳನ್ನು ನೀಡಿರುತ್ತಾರೆ.

**4.** ಉದ್ದೇಶಿತ ಪ್ರತಿವಾದಿ 4 ರವರು ತಮ್ಮ ತಕರಾರಿನಲ್ಲಿ, ಮಧ್ಯಂತರ ಅರ್ಜಿ ಸಂಖ್ಯೆ 4 ರಲ್ಲಿನ ಸಂಗತಿಗಳನ್ನು ಅಲ್ಲಗಳೆದು, ದಾವೆಯು ಚಾಲ್ತಿಯಲ್ಲಿದ್ದ ಬಗ್ಗೆ ಮಾಹಿತಿ ಇರುವುದಿಲ್ಲ. ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಪ್ರಾಮಾಣಿಕವಾಗಿ ಆಸ್ತಿಯನ್ನು ಖರೀದಿ ಮಾಡಿದ ಸದ್ಭಾವನ ಕರೀದಿದಾರರು ಆಗಿರುತ್ತಾರೆ. ವಾದಿಯು ಉದ್ದೇಶಿತ ಪ್ರತಿವಾದಿಗೆ ತೊಂದರೆ ಕೊಡುವ

ಉದ್ದೇಶದಿಂದ ಸುಳ್ಳು ಸಂಗತಿಗಳ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ತಕರಾರು ಮಾಡಿ ಸದರಿ ಮಧ್ಯಂತರ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ.

**5.** ಪ್ರಸ್ತುತ ದಾವೆಯನ್ನು ದಾವಾ ಆಸ್ತಿಯಲ್ಲಿ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ದಾಖಲಿಸಿರುತ್ತಾರೆ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳು ಎಂದು ವಾದವನ್ನು ಮಂಡಿಸಿರುತ್ತಾರೆ. 2 ನೇ ದಾವಾ ಆಸ್ತಿಯನ್ನು ಪ್ರತಿವಾದಿ 1 ಮತ್ತು 2 ರವರಿಂದ ಉದ್ದೇಶಿತ ಪ್ರತಿವಾದಿ 4 ರವರು ಖರೀದಿ ಮಾಡಿರುವುದು ರೆವಿನ್ಯೂ ದಾಖಲೆಗಳಿಂದ ಕಂಡು ಬರುತ್ತದೆ. ದಾವೆ ಬಾಕಿ ಇದ್ದಾಗ ಖರೀದಿ ಮಾಡಿರುತ್ತಾರೆ. ಸದರಿ ದಾವೆಗೆ ಪ್ರಸ್ತಾವಿತ ಪ್ರತಿವಾದಿ 4 ರವರು ಅವಶ್ಯಕ ಪಕ್ಷಕಾರರು ಆಗಿರುತ್ತಾರೆ. ಪ್ರಸ್ತಾವಿತ ಪ್ರತಿವಾದಿಯು ಸದ್ಭಾವನ ಖರೀದಿದಾರರೇ ಎಂಬುದನ್ನು ನಿರ್ಣಯಿಸಲು ವಿಚಾರಣೆಯ ಅಗತ್ಯವಿರುತ್ತದೆ. ಪ್ರಸ್ತುತ ದಾವೆಯಲ್ಲಿನ ಉಭಯ ಪಕ್ಷಕಾರರ ವ್ಯಾಜ್ಯವನ್ನು ಸಂಪೂರ್ಣವಾಗಿ ನಿರ್ಣಯಿಸಲು ಪ್ರಸ್ತಾವಿತ ಪ್ರತಿವಾದಿ ಅವಶ್ಯಕ ಪಕ್ಷಕಾರರು ಎನ್ನುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಅರ್ಜಿಯನ್ನು ನಿರಾಕರಿಸಿದರೆ ಮತ್ತಷ್ಟು ವಿಳಂಬವಾಗಿ, ಪ್ರಕರಣಗಳು ದ್ವಿಗುಣವಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸುವುದು ಸೂಕ್ತವೆಂದು ನಿರ್ಣಯಿಸಿ, ಈ ಕೆಳಕಂಡಂತೆಃ

## ಆದೇಶ

ಮಧ್ಯಂತರ ಅರ್ಜಿ ಸಂಖ್ಯೆ IV ಸಿ.ಪ್ರ.ಸಂಹಿತೆ ಕ್ರಮಾದೇಶ 1 ನಿಯಮ 10(2) ಸಹ ಕಲಂ.151 ರ ಅಡಿಯಲ್ಲಿ ವಾದಿಯ ಪರ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ, ಉದ್ದೇಶಿತ ಪ್ರತಿವಾದಿ 4 ರವರನ್ನು

ದಾವಾದಲ್ಲಿ 4 ನೇ ಪ್ರತಿವಾದಿಯನ್ನಾಗಿ ಸೇರ್ಪಡೆಗೊಳಿಸಲು ಆದೇಶಿಸಿದೆ.

ವಾದ ಪತ್ರದ ಶಿರೂನಾವೆಯಲ್ಲಿ ತಿದ್ದುಪಡಿ ಮಾಡಿ, ತಿದ್ದುಪಡಿ ವಾದ ಪತ್ರವನ್ನು ಸಲ್ಲಿಸಲು ದಿನಾಂಕ 16.11.2023 ರಂದು ಕರೆಯುವುದು.

**(ಪ್ರಕಾಶ್ ವಿ.)**
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**